(ಸಭೆಯು ೧೧ ಗಂಟೆ ೧೭ ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ಕೃಷ್ಣ ಅವರು ಪೀಠವನ್ನು ಅಲಂಕರಿಸಿದರು).

ಪ್ರಶ್ನೋತ್ತರ

ಅಧ್ಯಕ್ಷರು : ಶ್ರೀಯುತ ಎಸ್.ಎಸ್. ಪಾಟೀಲರು. ಮಾನ್ಯ ಪಾಟೀಲರೇ, ಇನ್ನೂ ಮಾನ್ಯ ಲೋಕೋಪಯೋಗಿ ಸಚಿವರು ಬಂದಿಲ್ಲ. ಅನಂತರ ತೆಗೆದುಕೊಳ್ಳೋಣ. ಮಾನ್ಯ ಡಿ.ಆರ್. ಪಾಟೀಲ್ ಅವರು. ಪ್ರಶ್ನೆ ಸಂಖ್ಯೆ ೨೫೨ (೩೪೬೪)

ಮಾನ್ಯ ಸಚಿವರು ಗೈರು ಹಾಜರಾಗಿದ್ದರು

ಮಾನ್ಯ ಸಿ.ಎಸ್.ಪುಟ್ಟರಾಜು ಅವರು ನಿಮ್ಮದು ಕೂಡ ಪಿಡಬ್ಲ್ಯೂಡಿ ಮಿನಿಸ್ಟರ್ ಇಲ್ಲ. ಅನಂತರ ತೆಗೆದುಕೊಳ್ಳೋಣ. ಮಾನ್ಯ ಪರಿಕಾರ್ ಭೀಮಪ್ಪ ಚನ್ನಪ್ಪ ಅವರದೂ ಅಷ್ಟೆ. ಮಾನ್ಯ ಬಸವರಾಜ್ ರಾಯರೆಡ್ಡಿಯವರೇ, ನಿಮ್ಮ ಪ್ರಶ್ನೆಯನ್ನು ಕೂಡ ಅನಂತರ ತೆಗೆದುಕೊಳ್ಳೋಣ. ಮುಂದಿನ ಪ್ರಶ್ನೆ ಶ್ರೀ ಜೆ.ಸಿ. ಮಾಧುಸ್ವಾಮಿಯವರದು. ನಿಮ್ಮ ಪ್ರಶ್ನೆಗೆ ೧೫ ದಿನಗಳ ಕಾಲಾವಕಾಶವನ್ನು ಕೋರಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಕಾಲಾವಕಾಶ ಕೋರುವ ಪ್ರಶ್ನೆ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮೂರು-ನಾಲ್ಕು ಜಿಲ್ಲೆಗಳ ಬಗ್ಗೆ ಕೇಳಿದ್ದಾರೆ. ಅದಕ್ಕಾಗಿಯೇ ಕಾಲಾವಕಾಶವನ್ನು ಕೇಳಿದ್ದೇವೆ ಅಷ್ಟೆ. ತಮಗೆ ವಿವರವಾಗಿ ಬೇಕಾಗಿದೆ ಎಂದು ಅದಕ್ಕಾಗಿ ಪೂರ್ತಿ ವಿವರವನ್ನು ಕೊಡೋಣವೆಂದು ಕಾಲಾವಕಾಶವನ್ನು ಕೇಳಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ದಯಮಾಡಿ ಹೇಳಿ. ಮೈನ್ಸ್ ಮಾಡುತ್ತಿರುವವರು ಫಾರೆಸ್ಟ್‌ನ್ನು ಎನ್‌ಕ್ರೋಚ್ ಮಾಡುತ್ತಿರುವುದು ಈ ಸರ್ಕಾರದ ಗಮನದಲ್ಲಿದೆಯೇ ಎಂದು ಕೇಳಿದ್ದೇನೆ. ಇದು ಇದೆಯೇ ಇಲ್ಲವೇ ಎಂದು ಹೇಳುವುದಕ್ಕೆ ಕಾಲಾವಕಾಶ ಬೇಕೆ? ಆಕಾಶದಲ್ಲಿರುವ ನಕ್ಷತ್ರಗಳು ಎಷ್ಟು ಎಂದು ಎಣಿಸಿ ಹೇಳಿ ಎಂದರೆ ನಾವು ಅದಕ್ಕೆ ಕಾಲಾವಕಾಶವನ್ನು ಕೊಡಬೇಕಾದುದು ನ್ಯಾಯ.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಗಳೇ, ಕಳೆದ ಅಧಿವೇಶನದಲ್ಲಿ ೧೪೯ ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ, ಮತ್ತೆ ಮತ್ತೆ ಅದೇ ಆಗುತ್ತಿದೆ ಎಂದು ಸದಸ್ಯರು ಹೇಳುತ್ತಿದ್ದಾರೆ. ಒಂದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಮಗೆ ಎಂದು ಅಲ್ಲ, ಇದು ಎಲ್ಲಾ ಸಚಿವರುಗಳಿಗೆ.

ಈಗ ಏನಾಗಿದೆ ಪ್ರಶ್ನೋತ್ತರದಲ್ಲಿ ಯಾವುದೋ ಒಂದು ಕಾರಣದಿಂದ ನೀವು ಉತ್ತರವನ್ನು ಕೊಡದಿದ್ದರೆ ಅದು ಈ ಸದನದ ಪ್ರಿವಿಲೇಜ್ ಆಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಅದನ್ನು ಸೀರಿಯಸ್ ಆಗಿ ವ್ಯೂ ಮಾಡುತ್ತೇನೆ. ನೀವು ಕಾಲವನ್ನು ತೆಗೆದುಕೊಳ್ಳಿ ಒಂದಲ್ಲ ಒಂದು ಕಾರಣಕ್ಕೆ. ಅದನ್ನು ನಿಗದಿತ ವೇಳೆಯಲ್ಲಿ ಉತ್ತರವನ್ನು ಕೊಡಲೇಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಇವರನ್ನು ಎಷ್ಟು ಎಕರೆ ಒತ್ತುವರಿ ಆಗಿದೆ ಎಂದು ಕೇಳಿಲ್ಲ.

ಅಧ್ಯಕ್ಷರು : ನಾನು ಹೇಳಿದ್ದೇನೆ ಮಾಧುಸ್ವಾಮಿಯವರೇ, ಅವರು ನಿಗದಿತ ಅವಧಿಯಲ್ಲಿ ಕೊಡಬೇಕು. ದಯಮಾಡಿ ಕುಳಿತುಕೊಳ್ಳಿ. ಅವರು ಕೊಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮೈನಿಂಗ್ ನಡೆಯುತ್ತಿರುವ ಕಡೆ ಫಾರೆಸ್ಟ್ ಲ್ಯಾಂಡ್ ಎನ್‌ಕ್ರೋಚ್ ಆಗಿದ್ದು ನಿಜವೇ ಎಂದು ಕೇಳಿದ್ದೇನೆ. ನನಗೆ ಈ ಅಧಿವೇಶನದಲ್ಲಿಯೇ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಕೊಡುತ್ತಾರೆ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಜಿ.ಎ. ಶ್ರೀರಾಮರೆಡ್ಡಿಯವರ ಪ್ರಶ್ನೆ. ಮಾನ್ಯ ಲೋಕೋಪಯೋಗಿ ಸಚಿವರಿಲ್ಲ. ಅನಂತರ ತೆಗೆದುಕೊಳ್ಳೋಣ. ಅನಂತರ ಮಾನ್ಯ ಎಸ್.ಎಲ್.ಧರ್ಮೇಗೌಡರು.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೆ ಇರುವಾಗ ಬರಬೇಡವೇ ?

ಅದ್ಯಕ್ಷರು : ಬರುತ್ತಾರೆ. ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆ ಇರುವಾಗ ಬರಬೇಕು.

ಅಧ್ಯಕ್ಷರು : ಬರಬೇಕು, ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೆ ಇರುವಾಗ ಉತ್ತರ ಕೊಡುವುದಕ್ಕೆ ಮೊದಲೇ ಕಾದು ಕುಳಿತಿರಬೇಕು.

ಅಧ್ಯಕ್ಷರು : ನಿಜ

ಶ್ರೀ ವಾಟಾಳ್ ನಾಗರಾಜ್ : ಅವರು ಬರುವಾಗ ನೀವು ಕೇಳುವುದು. ನಾವು ಎದ್ದು ನಿಲ್ಲಬೇಕು. ಇದೇನಿದು ಪರಿಪಾಠ.

ಅಧ್ಯಕ್ಷರು : ಆಯಿತು. ಪ್ಲೀಸ್, ಮಾನ್ಯ ಧರ್ಮೇಗೌಡರೇ ತಮ್ಮ ಪ್ರಶ್ನೆ ಕೇಳಿ.